2) ಜೂಟು ರೇಷ್ಮೆ ಗಿರಣಿ, ಚನ್ನಪಟ್ಟಣ(455) ಮತ್ತು ರೇಷ್ಮೆ ನೂಲು ತೆಗೆಯುವ ಘಟಕ, ಕನಕಪುರ(260) ಒಟ್ಟು 715 ಕಾರ್ಮಿಕರಿಗೆ ಸ್ವಯಂ ನಿವೃತ್ತಿ ನೀಡುವ ರೂ. 17.50 ಕೋಟಿಗಳನ್ನು ಮಂಜೂರು ಮಾಡುವುದು.

3) ಟಿ.ನರಸೀಪುರ ಹಾಗೂ ಮೈಸೂರು ಘಟಕಗಳನ್ನು ನಡೆಸಲು ರೂ. 7.50ಕೋಟಿಗಳ ಡಿಯು ಬಂಡವಾಳವನ್ನು ಹೆಚ್ಚಿಸಲು ಸರ್ಕಾರದ ಭರವಸೆ ಕೊಡುವುದು ಒಂದು ವೇಳೆ ಬೇರೆ ರಣಗಳಿಂದ ಸರ್ಕಾರ ಭರವಸೆ ಕೊಡಲು ಸಾಧ್ಯವಾದಿದಲ್ಲಿ ರೂ.7.50 ಕೋಟಿಗಳ ನೇರ ಹಣಕಾಸಿನ ಸಾಯವನ್ನು ಕೆ.ಎಸ್.ಐ.ಸಿ.ಗೆ ದುಡಿಯುವ ಬಂಡವಾಳಕ್ಕಾಗಿ ಸರ್ಕಾರವೇ ಒದಗಿಸುವುದು.

4) ನಿಗಮದಿಂದ ಸರ್ಕಾರಕ್ಕೆ ಬಾಕಿ ಇರುವ ರೂ. 22.91 ಕೋಟಿಗಳ ಸಾಲವನ್ನು ಶೇರು ಕ್ವೆಟಿ) ಬಂಡವಾಳವನ್ನು ಮಾರ್ಪಾಟು ಮಾಡಿ ನಿವ್ವಳ ಮೌಲ್ಯವನ್ನು ಸಕಾರಾತ್ಮಕ ವಾಗಿಸುವುದು.

ಕೆ.ಎಸ್.ಎಂ.ಬಿ

1) ಬೆಲೆ ಸ್ಥಿರೀಕರಣಕ್ಕಾಗಿ ಮಾರುಕಟ್ಟೆಯಲ್ಲಿ ಮಧ್ಯ ಪ್ರವೇಶ ಮಾಡಿ ರೇಷ್ಮೆ ನೂಲನ್ನು ೀದಿಸಿ ಮಾರಾಟ ಮಾಡುವುದಕ್ಕೆ ಚಟುವಟಿಕೆಗಳಿಗೆ ಹಾಲಿ ಇರುವಂತೆ ಸರ್ಕಾರದಿಂದ ಯಾವುದೇ ುದಾನ ಅಥವಾ ಸಹಾಯ ಅನುದಾನವನ್ನು ನೀಡುವ ಪದ್ದತಿ ಇರುವುದಿಲ್ಲ. ಬೆಲೆಸ್ಥಿರೀಕರಣ ಯೆಯಲ್ಲಿ ಈಗಿನ ಪರಿಸ್ಥಿತಿಯಲ್ಲಿ ಕೆಲವೊಂದು ಸಂರ್ಭಗಳಲ್ಲಿ ಉಂಟಾಗುವ ನಷ್ಟವನ್ನು ಭರಿಸಿ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುವುದಕ್ಕಾಗಿ ಸಂಸ್ಥೆಗೆ ಆ ರೀತಿ ಉಂಟಾದ ನಷ್ಟವನ್ನು ರ್ಕಾರದಿಂದ ಬೆಲೆ ಸಹಯ ಅನುದಾನ ರೂಪದಲ್ಲಿ ನೀಡುವ ಪ್ರಸ್ತಾವನೆಯು ಸರ್ಕಾರದ ಶೀಲನೆಯಲ್ಲಿದೆ.

443(741) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡಿ) ಮಾನ್ಯ ಪಶುಸಂಗೋಪನೆ ತ್ತು ವಕ್ಫ್ ಖಾತೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯಲ್ಲಿನ ಒಟ್ಟು 28.09 ಲಕ್ಷ ಜಾನುವಾರುಗಳಿಗೆ ಔಷಧಿ ಕೇವಲ 14.00 ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿರುವುದರಿಂದ ಪ್ರತಿ ಜಾನುವರಿಗೆ 0.50 ರೂ. ನ್ನು ಒದಗಿಸಿದಂತಾಗಿರುವುದರಿಂದ ಜಾನುವಾರುಗಳಿಗೆ ಸರ್ಮಪಕ ಚಿಕಿತ್ಸೆ ಒದಗಿಸುವಲ್ಲಿ ಆಡಚಣೆ ಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬೆಳಗಾವಿ ಜಿಲ್ಲೆಯಲ್ಲಿ ಜಾನುವಾರುಗಳ ಚಿಕಿತ್ಸೆಗೆ ಜಾನುವಾರು ಒಂದಕ್ಕೆ ಕನಿಷ್ಟ 10.00 . ಗಳನ್ನಾದರೂ ಬಿಡುಗಡೆ ಮಾಡಲಾಗುವುದೇ?

ಮಿರಾಜುದ್ದೀನ್ ಎನ್. ಪಾಟೀಲ್ (ಪಶುಸಂಗೋಪನೆ ಮತ್ತು ವಕ್ಫ್ ಖಾತೆ ಸಚಿವರು): ಅ) ಬಂದಿದೆ.

ಆ) ವಂಟನ ಲಭ್ಯತೆ ಅನುಗುಣವಾಗಿ ಬಿಡುಗಡೆ ಮಾಡಲಾಗುತಿದೆ.

444(742) ಶ್ರೀ ಮಾಮನಿ ವಿಶ್ವನಾಥ ಕರುಬಸಪ್ಪ(ಪರಾಸಗಡ) ಮಾನ್ಯ ರೇಷ್ಮೆ ಸಚಿವರು ುವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸವದತ್ತಿ ತಾಲ್ಲೂಕಿನ ರೇಷ್ಮೆ ಇಲಾಖೆಯ 29 ಎಕರೆಯುಳ್ಳ ಬೃಹತ್ ಫಾರಂ ಹೌಸ್‌ನಲ್ಲಿ ಸ ಮಾಡುತ್ತಿರುವ ನೌಕರರು ಸರಿಯಾದ ನೀರಾವರಿ ವ್ಯವಸ್ಥೆ ಇಲ್ಲದ ಕಾರಣ ಅಲ್ಲಿನ ಸವಲತ್ತುಗಳ ುಪಯೋಗ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಘಾರಂ ಹೌಸಿನ ಹತ್ತಿರ ಇರುವ ಮಲಪ್ರಭಾ ಜಲಾಶಯದ ನೀರನ್ನು ಪಂಪ್‌ಸೆಟ್ ಮೂಲಕ ರೇಷ್ಮೆ ಕೃಷಿಗೆ ಒದಗಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬಹುದಲ್ಲವೇ?

ಶ್ರೀ ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ) ಇಲ್ಲ.

ಆ) ಈ ಕ್ಷೇತ್ರದ ಮಣ್ಣು ಹಿಪ್ಪುನೇರಳೆ ವ್ಯವಸಾಯಕ್ಕೆ ಸೂಕ್ತವಿಲ್ಲ. ಈ ಮಣ್ಣಿನಲ್ಲಿ ಬೆಳೆದ ಬಿತ್ತನೆ ಗೂಡು ನೂಲು ಬಿಚ್ಚಾಣಿಕೆಗೆ ಮಾತ್ರ ಯೋಗ್ಯವಿರುತ್ತದೆ. ಆದ್ದರಿಂದ ಕ್ಷೇತ್ರವನ್ನು ಬಿತ್ತನೇ ಕ್ಷೇತ್ರವಾಗಿ ಅಭಿವೃದ್ಧಿಪಡಿಸಿದಲ್ಲಿ ಸರ್ಕಾರಕ್ಕೆ ನಷ್ಟವುಂಟಾಗುವುದರಿಂದ ಸೂಚಿತ ಕ್ರಮ ಸಾಧುವಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

445(721)ಶ್ರೀ ಜೆ. ನರಸಿಂಹಸ್ವಾಮಿ(ದೊಡ್ಡಬಳ್ಳಾಪುರ) ಮಾನ್ಯ ಭಾರಿ ಮಾಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಅಭಿವೃದ್ಧಿ ಸಚಿವರು.

ಅ) ಸಣ್ಣ ಕೈಗಾರಿಕೆಗಳಿಗೆ ಸಹಾಯಧನ ನೀಡುವುದಾಗಿ ಸಚಿವರು ನೀಡಿದ್ದ ಭರವಸೆ ಬಗ್ಗೆ ಸರ್ಕಾರದಿಂದ ಯಾವ ಕ್ರಮ ತೆಗೆದುಕೊಳ್ಳಲಾಗಿದೆ;

ಆ) ಪ್ರಸಕ್ತ ಸಾಲಿನಲ್ಲಿ ರಾಜ್ಯ ಸಹಾಯಧನ ಮಂಜೂರಾದ 6562 ಘಟಕಗಳಿಗೆ ಶೇ:50 ರಂತೆ ರೂ. 77.59 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಬಾಕಿ ಉಳಿದ ಸಹಾಯಧನವನ್ನು 2004–05 ಹಾಗೂ 2005–06ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

446(724)ಶ್ರೀ. ನರಸಿಂಹಸ್ವಾಮಿ. ಜಿ(ದೊಡ್ಡ ಬಳಾಪುರ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಡೆಯುವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಒಂದು ದಿನಕ್ಕೆ ತಗಲುವ ವೆಚ್ಚ ವೆಷ್ಟು;

ಡಾ॥ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಯು ಮೇಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗೆ ಪ್ರತಿ ದಿನ ರೂ. 13.33 ಗಳ ಹಾಗೂ ಮೆಟ್ರಿಕ್ ನಂತರದ ಪ್ರತಿ ವಿದ್ಯಾರ್ಥಿಗೆ ರೂ. 15.00 ರಂತೆ ವೆಚ್ಚ ಮಾಡುತ್ತಿದೆ.

447(725) ನರಸಿಂಹಸ್ವಾಮಿ. ಜೆ(ದೊಡ್ಡಬಳ್ಳಾಪುರ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ನಿಗಮದ ವತಿಯಿಂದ ಪ್ರತಿ ತಾಲ್ಲೂಕಿಗೆ ಎಷ್ಟು ಜನ ಫಲಾನುವಿಗಳನ್ನು ಆಯ್ಕೆ ಮಾಡಬೇಕೆಂದು ನಿಗದಿಪಡಿಸಿದೆ;

ಆ) ಪ್ರತಿ ಫಲಾನುಭವಿಗೆ ಎಷ್ಟು ಸಹಾಯ ಧನವನ್ನು ನೀಡಲಾಗುತ್ತಿದೆ?